ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಮತ್ತು ಎರಡನೇ ಪ್ರಶ್ನೆ ಇದಕ್ಕೆ ಏನಾದರೂ ರಿಯಾಯಿತಿಯನ್ನು ಕೊಡುತ್ತೀರಾ ಅಥವಾ ಇಲ್ಲ ಅಂದರೆ ತೆರಿಗೆಯನ್ನು ಏನಾದರೂ ಕಡಿಮೆ ಮಾಡಿತ್ತೀರಾ ಅಂದಿದ್ದಕ್ಕೆ ಇಲ್ಲ ಎಂದಿದ್ದಾರೆ. ಈಗ ನನ್ನ ಒತ್ತಾಯ ಏನೆಂದರೆ ನೀವು ಕರ್ನಾಟಕ ರಾಜ್ಯದಲ್ಲಿ ಏನಾದರೂ ಮಾಡಿಕೊಳ್ಳಿ, ಆದರೆ ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಬಸಗಳ ಮೇಲೆ ಇರತಕ್ಕಂತಹ ಏನು ಮೋಟಾರ್ ಟ್ಯಾಕ್ಸ ಹಾಕುತ್ತಿದ್ದೀರಿ ಅದನ್ನು ಪೂರ್ಣ ರಿಯಾಯಿತಿಯನ್ನು ಕೊಡಬೇಕೆಂದು ಕೇಳುತ್ತೇನೆ. ಯಾಕೆ ಕೇಳುತ್ತಿದ್ದೆನೆಂದರೆ ಈ ಬಿ.ಟಿ.ಎಸ್. ಬಸಗಳವರನ್ನು ಏನಾದರೂ ಒಂದು ಶೇಲ್ಟರ್ ಕಟ್ಟಿ ಎಂದರೆ ನೀವು ಏನಾದರೂ ಡೊನೇಷನ್ ಕೊಡಿ ಎಂದು ಕೇಳುತ್ತಾರೆ. ಏಕೆಂದರೆ ಬಿ.ಟಿ.ಎಸ್. ಸಂಸ್ಥೆ ಪೂರ್ಣ ನಷ್ಟದಲ್ಲಿದೆ. ಒಂದು ಶೆಲ್ಟರ್‌ನ್ನು ಕಟ್ಟಿಕೊಡುವುದಕ್ಕೆ ಅವರ ಕೈಯಲ್ಲಿ ಆಗುತ್ತಿಲ್ಲ. ನಾನೇ ನಮ್ಮಕ್ಷೇತ್ರದಲ್ಲಿ ನಾಲ್ಕು ಶೆಲ್ಟರ್‌ಗಳನ್ನು ಕಟ್ಟಿಸಿ ಕೊಟ್ಟಿದ್ದೇನೆ. ಯಾರಾದರೂ ಡೋನರ್ಸ್‌ಗಳನ್ನು ಕೊಡಿ ಶೆಲ್ಟರಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುತ್ತಾರೆ. ಕೊನೆಯ ಪಕ್ಷ ಈ ಟ್ಯಾಕ್ಸನ್ನಾದರೂ ತೆಗೆದು ಹಾಕಿದರೆ, ಆ ಹಣ ಜನರಿಗೆ ಅನುಕೂಲವಾಗುವ ಕಡೆ ಆ ಹಣವನ್ನು ಖರ್ಚು ಮಾಡಬಹುದು. ಆದ್ದರಿಂದ ಬೆಂಗಳೂರು ವಿಭಾಗಕ್ಕಾದರೂ ಈ ರಿಯಾಯಿತಿಯನ್ನು ಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಸದಸ್ಯರ ಸಲಹೆಯನ್ನು ಪರಿಶೀಲಿಸಲಾಗುವುದು.

ಆಸ್ತಿ ಖರೀದಿಸುವಾಗ ನೋಂದಾಣಿ ಶುಲ್ಕದ ವಿವರ ಕುರಿತು

327 - ಶ್ರೀ ಸಿ.ಎಂ. ಉದಾಸಿ (ಹಾನಗಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನಲ್ಲಿ 1993-94 ಹಾಗೂ 1994-95ನೇ ಸಾಲಿನಲ್ಲಿ ಸಾರ್ವಜನಿಕರು ಆಸ್ತಿ ಖರೀದಿ ಮಾಡಿದ ಬಗ್ಗೆ ನೋಂದಣಿ ಅಧಿಕಾರಿಗಳು ನಿಗಧಿಪಡಿಸಿದ ನೋಂದಣಿ ಶುಲ್ಕ ಕಡಿಮೆ ಎಂದು ಮತ್ತೆ ನೋಂದಣಿ ಶುಲ್ಕವನ್ನು ಅತಿರೇಕವಾಗಿ ಹೆಚ್ಚಿನ ವಿತರಣೆ ಮಾಡಿದ್ದು, ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ :

ಅ) 1993-94 ಮತ್ತು 1994-95ನೇ ಸಾಲಿನಲ್ಲಿ ಕರ್ನಾಟಕಕ ಮುದ್ರಾಂಕ ಅಧಿನಿಯಮ 1957ರ ಕಲಂ - 45ಎ (1) ರಡಿಯಲ್ಲಿ ಕಡಿಮೆ ನೋಂದಣಿ ಶುಲ್ಕ ಪಾವತಿ ಮಾಡಿರುವ ಪ್ರಕರಣವನ್ನು ಹಾನಗಲ್ ಉಪ-ನೋಂದಣಾಧಿಕಾರಿಗಳು ಧಾರವಾಡ ಜಿಲ್ಲಾ - ನೋದಣಾಧಿಕಾರಿಗಳಿಗೆ ಉಲ್ಲೇಖಿಸಿದ್ದು, ಹಾಗೂ ಕಲಂ - 45 ಎ (3) ರಡಿಯಲ್ಲಿ ಜಿಲ್ಲಾ - ನೋಂದಣಾಧಿಕಾರಿಗಳು ಸ್ವಇಚ್ಛೆಯಿಂದ ಕಡಿಮೆ ನೋಂದಾಣಿ ಶುಲ್ಕ ಪಾವತಿ ಮಾಡಿರುವ ಪ್ರಕರಣಗಳನ್ನು ವಿಚಾರಣೆಗೆ ತೆಗೆದುಕೊಂಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) 1993-94 ಮತ್ತು 1994-95ನೇ ಸಾಲಿನಲ್ಲಿ ಸಾರ್ವಜನಿಕರು ಆಸ್ತಿಯನ್ನು ಅಪಮೌಲ್ಯಗೊಳಿಸಿ ದಸ್ತಾವೇಜುಗಳನ್ನು ನೋಂದಾಯಿಸಿರುವ 170 ಪ್ರಕರಣಗಳನ್ನು ಸ್ವತ್ತಿನ ಮಾರುಕಟ್ಟೆ

ಮೌಲ್ಯ ನಿರ್ಧರಣೆಗಾಗಿ ಹಾನಗಲ್ ಉಪ-ನೋಂದಣಾಧಿಕಾರಿಯು ಧಾರವಾಡ ಜಿಲ್ಲಾ - ನೋಂಡಾಣಾಧಿಕಾರಿಯವರಿಗೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ ಕಲಂ-45-ಎ(1) ರಡಿಯಲ್ಲಿ ಉಲ್ಲೇಖಿಸಿರುತ್ತಾರೆ. ಇದರಲ್ಲಿ 12 ಪ್ರಕರಣಗಳನ್ನು ತೀರ್ಮಾನಿಸಿ 9,620.00 ರೂ.ಗಳ ಕೊರತೆಯಾದ ರಾಜಸ್ವವನ್ನು (ಮುದ್ರಾಂಕ ಮತ್ತು ನೋಂದಣಿ ಶುಲ್ಕ ಸೇರಿ) ವಸೂಲಿ ಮಾಡಿರುತ್ತಾರೆ. ಇದರೊಂದಿಗೆ ನೋಂದಣಿ ಕಛೇರಿಯ ತಪಾಸಣೆ ಸಮಯದಲ್ಲಿ ಸ್ವತ್ತನ್ನು ಅಪಮೌಲ್ಯಗೊಳಿಸಿರುವುದು 22 ಪ್ರಕರಣಗಳನ್ನು ಕಲಂ-45-ಎ(3) ರ ಅಡಿಯಲ್ಲಿ ಸ್ವಇಚ್ಛೆಯಿಂದ ತೆಗೆದುಕೊಂಡಿದ್ದು, ಪ್ರಕರಣಗಳು ತೀರ್ಮಾನಕ್ಕೆ ಬಾಕಿ ಇರುತ್ತವೆ.

ಅಪಮೌಲ್ಯಗೊಂಡಂತಹ ಪ್ರಕರಣಗಳ ಆಸ್ತಿಯ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸಿದಾಗ ಹೆಚ್ಚುವರಿಯಾದ ಮೌಲ್ಯಕ್ಕೆ ಜಿಲ್ಲಾ-ನೋಂದಣಾಧಿಕಾರಿಯವರು ನೋಂದಣಿ ಶುಲ್ಕವನ್ನು ವಸೂಲಿ ಮಾಡಲು ಕಾಯ್ದೆಯಲ್ಲಿ ಅವಕಾಶವಿರುವುದರಿಂದ, ಅದರಂತೆ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೇ, ನಾನು (ಅ) ಪ್ರಶ್ನೆಯನ್ನು ಕೇಳಿದ್ದರಲ್ಲಿ 192 ಪ್ರಕರಣಗಳನ್ನು ಜಿಲ್ಲಾ ನೋಂದಾಣಿ ಅಧಿಕಾರಿಗಳು ಹೆಚ್ಚಿನ ತೆರಿಗೆಗಳನ್ನು ವಸೂಲು ಮಾಡುವ ಸಲುವಾಗಿ ನೋಟೀಸಗಳನ್ನು ಕೊಟ್ಟಿದ್ದಾರೆ ಎನ್ನುವ ಮಾತು ಮತ್ತು ವಿಚಾರಣೆಯಲ್ಲಿದೆ ಎಂದು ಹೇಳಿದ್ದಾರೆ. ಇದರಲ್ಲಿ 12 ಪ್ರಕರಣಗಳು ಮಾತ್ರ ವಿಚಾರಣೆಯಾಗಿದೆ ಎಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. ನನಗೆ ಬಂದಿರುವ ಪ್ರಕಾರ ಜಿಲ್ಲಾ ನೋಂದಣಿ ಅಧಿಕಾರಿಗಳು ಅತಿರೇಕವಾಗಿ ನೋಟೀಸ್‌ಗಳನ್ನು ಕೊಡುತ್ತಾರೆ, ಮತ್ತು ಅದರ ಬಗ್ಗೆ ಅತಿರೇಕವಾಗಿ ಹಣವನ್ನು ಗುರುತುಪಡಿಸಿ ಅವರಿಗೆ ನೋಟೀಸ್‌ಗಳನ್ನು ಕೊಟ್ಟಿರತಕ್ಕಂತಹ ಉದಾಹರಣೆಗಳು ಸರ್ಕಾರದ ಗಮನಕ್ಕೆ ಬಂದಿದೆ ಎನ್ನುವಂತಹ ಮಾತನ್ನು ಕೇಳಿದ್ದೇನೆ. ಏಕೆಂದರೆ ಒಂದು ಆಸ್ತಿಯನ್ನು ಕೇವಲ 20,000 ರೂ.ಗಳಿಗೆ ಖರೀದಿ ಮಾಡಿದಂತಹ ಆಸ್ತಿಗೆ, ತಾಲ್ಲೂಕು ನೋಂದಾಣಾಧಿಕಾರಿಗಳು 40,000 ರೂ.ಗಳಿಗೆ ನೋಟೀಸ್ ಕೊಟ್ಟು ಯಾಕೆ ಇದಕ್ಕೆ ಸ್ಟಾಂಪ್ ಶುಲ್ಕವನ್ನು ಹಾಕಬಾರದು ಎಂದು ನೋಟೀಸ್ ಕೊಡುತ್ತಾರೆ ಎಂದರೆ, ಇದು ಬಹಳ ವ್ಯತಿರಿಕ್ತವಾಗಿದೆ. ಎಲ್ಲಿ 40,000 ರೂ.ಗಳಿಗೆ ನೋಂದಾಣಿಯಾಗಿರುವುದಕ್ಕೆ 23 ಲಕ್ಷ ರೂ.ಗಳೆಂದು ನೋಟೀಸ್ ಕೊಟ್ಟರೆ, ಇದು ಜನಸಮಾನ್ಯರ ಮೇಲೆ ಏನು ಪರಿಣಾಮ ಬೀರುತ್ತದೆ ಅನ್ನುವುದೂ ಸಹ ಸರ್ಕಾರದ ಗಮನಕ್ಕೆ ಬರುತ್ತದೆ. ಏಕೆಂದರೆ ಈ ರೀತಿಯಾಗಿ ಕೊಡುವುದರಿಂದ ಭಷ್ಟಚಾರಕ್ಕೆ ಅವಕಾಶವಾಗುತ್ತದೆ. ಇಂತಹ ಪ್ರಕರಣಗಳು ಮತ್ತು ಅನೇಕ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದರೆ ಈ ಪ್ರಕರಣದಲ್ಲಿ ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತಿದ್ದೇನೆ, ಇಲಾಖಾಧಿಕಾರಿಗಳು ಕೊಡುತ್ತಿರುತಕ್ಕಂತಹ ನೋಟೀಸಗಳ ಬಗ್ಗೆ ಸಹಿತ ವಿಶೇಷ ಕ್ರಮವನ್ನು ಕೈಗೊಳ್ಳುತ್ತೀರಾ ಎಂದು ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, 40,000 ರೂ.ಗಳಿಗೆ ನೋಂದಣಿಯಾಗಿರುವುದಕ್ಕೆ 23 ಲಕ್ಷ ರೂ.ಗಳೆಂದು ಕೊಡುವಂತಹ ಹುಚ್ಚುತನವನ್ನು ಅವರು ಮಾಡಲಾರರು ಎಂದು ನಾನು ಅಂದುಕೊಂಡಿದ್ದೇನೆ. ಆ ರೀತಿ ಏನಾದರೂ ಇದ್ದರೆ ನನಗೆ ಕಳುಹಿಸಿ ಕೊಡಿ. ನಾನು ಅದರ ಮೇಲೆ

ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಎಲ್ಲಿ ಅಂಡರ್ ವ್ಯಾಲ್ಯೂವೇಷನ್ ಆಗುತ್ತದೆ ಅದಕ್ಕೆ ನಾವು ಈಗ ಒಂದು ಗೈಡ್ ಲೈನ್ಸವ್ಯಾಲ್ಯೂ ಎಂದು ಒಂದು ಪಟ್ಟಿಯನ್ನು ಕೊಟ್ಟಿದ್ದೇವೆ. ನಾವು ಕೊಟ್ಟಿರುವಂತಹ ಗೈಡ್ ಲೈನ್ಸ್‌ವ್ಯಾಲ್ಯೂ ಮಾರುಕಟ್ಟೆ ಬೆಲೆಗಿಂತ 20 ಪರ್ಸೆಂಟ್‌ನಿಂದ 30 ಪರ್ಸೆಂಟ್ ಕಡಿಮೆನೇ ಇದೆ. ಅದಕ್ಕಿಂತ ಕಡಿಮೆಗೆ ರಿಜಿಸ್ಟ್ರೇಷನ್ ಆದಾಗ ಸಬ್ ರಿಜಿಸ್ಟ್ರಾರು ಡಿಸ್ಟ್ರಿಕ್ ರಿಜಿಸ್ಟ್ರಾರ್‌ಗೆ ಕಳುಹಿಸುತ್ತಾರೆ. ಕೆಲವು ಕೇಸಗಳಲ್ಲಿ ಸುವೋಮೋಟೋ ಡಿಸ್ಟ್ರಿಕ್ ರಿಜಿಸ್ಟ್ರಾರರವರು ಇನಸ್ಪೆಕ್ಷನಗೆ ಹೋದಾಗ ಇಂತಹಗಳನ್ನೇಲ್ಲಾ ಪರಿಶೀಲನೆ ಮಾಡಿ, ನಾವು ಏನು ಗೈಡಲೈನ್ಸ್ ವ್ಯಾಲ್ಯೂ ಕೊಟ್ಟಿದ್ದೇವೆ, ಮತ್ತು ಅದನ್ನು ಹೆಚ್ಚು ಮಾಡಿದ್ದಾರೋ, ಕಡಿಮೆ ಮಾಡಿದ್ದಾರೋ ಎಂದು ನೋಡಿ, ಕಡಿಮೆ ಮಾಡಿದ್ದಾರೆ ಅವರೂ ಕೂಡ ಈ ರೀತಿಯ ಕೇಸಗಳನ್ನು ತೆಗೆದುಕೊಳ್ಳಬಹುದು. ಈ ರೀತಿ ಮಾಡುವುದಕ್ಕೆ ಅವಕಾಶವಿದೆ. ಇದನ್ನು ತಪ್ಪಿಸಬೇಕು, ನಿಖರವಾಗಿ ರಿಜಿಸ್ಟ್ರಾರ್ ಮಾಡಬೇಕೆಂದು ಬಂದವರಿಗೆ ನಿಮ್ಮ ಆಸ್ತಿಗೆ ಇಷ್ಟೇ ವ್ಯಾಲ್ಯೂವನ್ನು ಸರ್ಕಾರ ಗೈಡಲೈನ್ಸ್ ವ್ಯಾಲ್ಯೂ ಪ್ರಕಾರ ಫಿಕ್ಸ್ ಮಾಡಿದೆ ಮತ್ತು ಇಷ್ಟು ರಿಜಿಸ್ಟ್ರೇಷನ್ ಫೀ ಮತ್ತು ಸ್ಟಾಂಪ್ ಡ್ಯೂಟಿಯನ್ನು ಕಟ್ಟಿದ್ದರೆ ರಿಜಿಸ್ಟರ್ ಮಾಡಿಕೊಡುತ್ತೇವೆಂದು ಒಂದು ಎಂಡಾರ್ಸೆಮೆಂಟ್ ಕೊಡುತ್ತಾರೆ. ಈಗ ಮಾಡಿದ್ದೇವೆ ಈ ರೀತಿಯ ಸಿಸ್ಟಂ. ರಿಜಿಸ್ಟರ್ ಮಾಡಿಸಲಿಕ್ಕೆ ಬಂದಿರುವವರು ನೊಂದಾಣಾಧಿಕಾರಿಗಳು ಹಾಕಿರುವ ರೇಟಗೆ ಅವರು ಒಪ್ಪಿಕೊಳ್ಳಬಹುದು ಇಲ್ಲ ಅದಕ್ಕೆ ಆಗುವುದಿಲ್ಲ ಎಂದರೆ ಅಧರ ಕೆಳಗೆ ಷರ ಬರೆದು ಇಲ್ಲ ನಾನು ಹಾಕಿರುವುದೇ ಸರಿ ಇದೆ ಎಂದು ಹೇಳಿದರೆ, ಇದೇ ರೀತಿಯಲ್ಲಿ ರಿಜಿಸ್ಟರ್ ಮಾಡಿ ಅವನ ಏದುರುಗದೆನೇ ಸ್ಟಾಂಪ್ ಒತ್ತಿ, ಇದು ಅಂಡರ್ ವ್ಯಾಲ್ಯೂವೇಷನ್ ಆಗಿದೆ. ಇದನ್ನು ಅಂಡರ್ ಸಕ್ಷನ್ 45 (ಎ) ಜೆಲ್ಲಾ ನೋಂದಾಣಾಧಿಕಾರಿಗಳಿಗೆ ಕಳುಹಿಸುತ್ತಿದ್ದೇನೆಂದು, ಹೇಳಿ ಎಂದು ರಬ್ಬರ್ ಸ್ಟಾಂಪನ್ನು ಒತ್ತಬೇಕೆಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಇದರಿಂದ ನಾನು ಅಂದು ಕೊಂಡಿದ್ದೇನೆ ಶೇಕಡ 90 ರಷ್ಟು ಕಿರುಕುಳ ತಪ್ಪಬಹುದು ಎಂದು. ಈ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಕೇವಲ 40,000 ನೊಂದಾಣಿ, ಆಗಿದ್ದಕ್ಕೆ ಒಂದು ಆಧಾರವನ್ನು ಕೊಡುತ್ತಿದ್ದೇನೆ, ಆ ಆಧಾರದಲ್ಲಿ 28 ಲಕ್ಷ ರೂ.ಗಳಿಗೆ ನೋಟೀಸ್ ಕೊಟ್ಟಿದ್ದಾರೆ. ಕೊನೆಗೆ ಅದನ್ನು ಕಡಿಮೆ ಮಾಡಿದ್ದಾರೆ. ಈ ರೀತಿ 28 ಲಕ್ಷ ರೂ.ಗಳಿಗೆ ನೋಟೀಸ್ ಕೊಟ್ಟಾಗ ಸಾಮಾನ್ಯ ವಾಗಿ ಆ ಮನುಷ್ಯನ ಮೇಲೆ ಆಗುವ ಪರಿಣಾಮವನ್ನು ನಾವು ಆಲೋಚನೆಯನ್ನು ಮಾಡಬೇಕು. ಅವರು ನಾವು ಇಲ್ಲಿ ಎಷ್ಟು ಹಣವನ್ನು ಕೊಡಬೇಕಾಗುತ್ತದೆಂದು ಗಾಬರಿಯಿಂದ ಅವನೂ ಸಹ ಭಷ್ಟಚಾರಕ್ಕೆ ಮುಳುಗುತ್ತಾನೆ. ಏನಾದರೂ ಅಧಿಕಾರಿಗಳಿಗೆ ದುಡ್ಡು ಕೊಟ್ಟು ಸರಿ ಮಾಡಿಸಬೇಕೆಂದು ಸ್ವಾಭಾವಿಕವಾದ ಭಾವನೆ ಇರುತ್ತದೆ. ಅಂಥವೊಂದನ್ನು ತಮ್ಮ ಗಮನವನ್ನು ಸೆಳೆಯುವುದಕ್ಕಾಗಿ ಕಳುಹಿಸಿಕೊಡುತ್ತಿದ್ದೇನೆ. ದಯವಿಟ್ಟು ಇದರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ಈ ಆಸ್ತಿ ವ್ಯಾಲ್ಯೂವೇಷನ್ ಮಾಡುವಾಗ ಸರ್ಕಾರದ ರೇಟ್ ಏನು? ಇದರ ಮೇಲೆ ಸಬ್ ರಿಜಿಸ್ಟ್ರಾರ್‌ಗೆ ಎಷ್ಟರ ಮಟ್ಟಿನ ಡಿಸ್ಕ್ರಿಪಷನ್ ಇದೆ, ಅದನ್ನು ಅವರು ಯಾವ ರೀತಿ ಜ್ಯುಡಿಷಿಯಸ್ ಆಗಿ ಎಕ್ಸರ್ಸೈಸ್ ಮಾಡುತ್ತಾರೆ. ಅದರ ಮೇಲೆ ಯಾವ

ಆಧಾರದ ಮೇಲೆ ಡಿಸ್ಟ್ರಿಕ್ ರಿಜಿಸ್ಟ್ರಾರ್ ಅಪ್ರೂವ್ ಮಾಡಿ ವಾಪಸು, ಕಳುಹಿಸುತ್ತಾರೆ? ಇದು ನಮಗೆ ಗೊತ್ತು. ಇದು ಬಹಳ ಕಷ್ಟದ ಕೆಲಸ. ಅವರು ಬೇಕು ಎಂದರೆ ಅದೇ ವ್ಯಾಲ್ಯೂ; ಬೇಡ ಎಂದರೆ ಮೇಲೆ ಕಳುಹಿಸಿ ಹೆರ್ಯಾಸಮೆಂಟ್ ಆಗುವುದನ್ನು ಯಾವ ರೀತಿಯಲ್ಲಿ ತಪ್ಪಿಸಬಹುದೆಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಾವು ಈಗ ಪ್ರತಿಯೊಂದು ತಾಲ್ಲೂಕಿನಲ್ಲೂ ಗೈಡ್ ಲೈನ್ಸನ ವ್ಯಾಲ್ಯೂ ಫೀಕ್ಸ ಮಾಡುವುದಕ್ಕೆ ಒಂದು ಕಮಿಟಿಯನ್ನು ಮಾಡಿದ್ದೇವೆ. ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ. ಮತ್ತು ಬೆಂಗಳೂರಿನಲ್ಲಿ ಕೂಡ ಅಂತಹ ಕಮಿಟಿಗಳನ್ನು ಮಾಡಿ.....

Mr. SPEAKER : Discretion should not be used indiscreetly.

ಶ್ರೀ ಆರ್.ಎಲ್. ಜಾಲಪ್ಪ : ಇಲ್ಲ, ಈಗ ಡಿಸ್ಕ್ರಷನಗೆ ಅವಕಾಶವನ್ನು ಕಡಿಮೆ ಮಾಡಿದ್ದೇವೆ. ಇನ್ನು ಒಂದೆರಡು ತಿಂಗಳಿನಲ್ಲಿ ಸೈನಟಿಫಿಕಕ್ಕಾಗಿ ಮಾಡಿ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ, ಪ್ರತಿಯೊಂದು ಜಿಲ್ಲೆಯಲ್ಲಿಯೂ ಆಧಾರವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಈಗ ಸಬ್ ರಿಜಿಸ್ಟ್ರಾರ್‌ರವರು ಆಸ್ತಿಯನ್ನು ವ್ಯಾಲ್ಯೂವೇಷನ್ ಮಾಡುವಾಗ ಯಾವ ಒಂದು ಅಳತೆಯಗೋಲನ್ನಾಗಿ ಮಾಡುತ್ತಾರೆ. ಮತ್ತು ನಾನು ಒಂದು ಉದಾಹರಣೆಗೆ ಹೇಳಬೇಕಾದರೆ ಹುಬ್ಬಳ್ಳಿಯಲ್ಲಿ ಪ್ರತಿವರ್ಷ, ಈ ವರ್ಷ ಏನು ಮಾರ್ಕೆಟ್ ವ್ಯಾಲ್ಯೂವೇಷನ್ ಇರುತ್ತದೆ ಅದಕ್ಕೆ ಮುಂದಿನ ವರ್ಷ 40 ಪರ್ಸೆಂಟ್ ಜಾಸ್ತಿಮಾಡುತ್ತಿದ್ದಾರೆ. ಪ್ರತಿ ವರ್ಷನ್ನೂ ಕೂಡ ಈ ರೀತಿಯಾಗುತ್ತದೆ. ಇದು ಸರಿನೋ ಹೇಗೋ ರೂಲ್ಸ ಮಾಡಿದ್ದಾರೋ, ಹೇಗೋ, ಇದನ್ನು ಸ್ಪಷ್ಟೀಕರಣ ಮಾಡಬೇಕು. ಮತ್ತು ಕೆಲವು ಸಬ್ ರಿಜಿಸ್ಟ್ರಾರಗಳು ಒಂದು ಆಸ್ತಿಯ ವ್ಯಾಲ್ಯೂ 2 ಲಕ್ಷ ರೂ.ಗಳಿದ್ದರೆ, 10 ಲಕ್ಷ ರೂ.ಗಳು ಇದೆ ಎಂದು ಹೇಳಿ, ನಂತರ ಅದನ್ನು 3 ಲಕ್ಷ ರೂ.ಗಳಿಗೆ ವ್ಯಾಲ್ಯೂವೇಷನ್ ಮಾಡುತ್ತಾರೆ. ಈ ರೀತಿಯಾಗಿ ಭಷ್ಟಚಾರ ನಡೆಯುತ್ತಿದೆ. ಇದರ ಬಗ್ಗೆನೂ ಮಾನ್ಯ ಸಚಿವರು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ, ವ್ಯಾಪಾರ ಮಾಡುವುದಕ್ಕೆ ಅವಕಾಶವಿರಬಾರದೆಂದು ಹೇಳಿ ಕಡಮೆ ಮಾಡುತ್ತಿದ್ದೇವೆ. ಆ ಮಾರ್ಕೆಟ್ ವ್ಯಾಲ್ಯೂ ಯಾವ ರೀತಿ ಏರುತ್ತಿದೆ ಎಂಬುದನ್ನು ನೋಡಿ. ಬೆಂಗಳೂರು ಸುತ್ತಮುತ್ತವಾಗಲಿ ಹುಬ್ಬಳ್ಳಿಯಲ್ಲಿ ಆಗಲಿ ಎಲ್ಲಾ ಕಡೆಯಲ್ಲೂ 30 ಪರ್ಸೆಂಟ್ ನಿಂದ 40 ಪರ್ಸೆಂಟ್ ಗೈಡ್ ಲೈನನಲ್ಲಿ ಕಡಿಮೆಯೇ ಇದೆ. ಉದಾಹರಣೆಗೆ ಬೆಂಗಳೂರಿನಲ್ಲಿ Between Bangalore and Devanahallii ರೋಡ್ ಸೈಡನಲ್ಲಿ 20 ರಿಂದ 25 ಲಕ್ಷ ರೂ.ಗಳಾಗಿದೆ.

11 ಪಿ.ಎಂ

ನಾವು ಕೊಟ್ಟಿರುವುದು ಬರೀ 8 ಲಕ್ಷಕ್ಕೆ ಎಂದು ಕಾಣುತ್ತದೆ. ಅದನ್ನು ನಾವು ಸ್ವಲ್ಪ ಜಾಸ್ತಿ ಮಾಡುತ್ತಿದ್ದೇವೆ. ಯಾವ ರೇಟಿನಲ್ಲಿ ಪ್ರಾಪರ್ಟಿ ಬೆಲೆ ಜಾಸ್ತಿಯಾಗುತ್ತಿದೆ ಆ ರೇಟಿನಲ್ಲಿ ನಾವು ಜಾಸ್ತಿ ಮಾಡುತ್ತಿಲ್ಲ. ನಮ್ಮ ಗೈಡೆನ್ಸ್ ವ್ಯಾಲ್ಯು 30-40 ಪರ್ಸೆಂಟ್ ಕಡಿಮೆ ಇದೆ. ಪ್ರತಿಯೊಂದು ತಾಲ್ಲೂಕಿನಲ್ಲಿ

ನಾವು ಕಮಿಟಿಗಳನ್ನು ಮಾಡಿದ್ದೇವೆಂದು ನಾನು ಈಗಾಗಲೇ ಹೇಳಿದ್ದೇನೆ. ಕಮಿಟಿಯವರು ನಾನಾ ಮೂಲೆಗಳಲ್ಲಿ ಹೋಗಿ ಪರೀಕ್ಷೆ ಮಾಡಿ ಆಮೇಲೆ ಒಂದು ವಾಲ್ಯುಯೇಷನ್ ಎಂದು ಕೊಟ್ಟು ಅದನ್ನು ಫಾಲೋ ಮಾಡಿ ಎಂದು ಹೇಳುತ್ತೇವೆ. ಇದನ್ನು ಪ್ರಿಂಟ್ ಮಾಡಿ ಎಲ್ಲರಿಗೆ ತಲುಪುವ ಹಾಗೆ ಮಾಡುತ್ತೇನೆ.

ಶ್ರೀ ಹೆಚ್. ಶಿವಪ್ಪ : ಮಾನ್ಯ ಮಂತ್ರಿಗಳು ಮಾರುಕಟ್ಟೆ ಮೌಲ್ಯವನ್ನು ನಿಗದಿ ಮಾಡುವುದಕ್ಕೆ ಒಂದು ತಾಲ್ಲೂಕು ಸಮಿತಿ ಮಾಡುತ್ತೇವೆಂದರು ಹೇಳಿದರು. ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡುತ್ತೇವೆಂದರು. ಅದರಲ್ಲಿ ಬೇರೆ ಸದಸ್ಯರು ಯಾರಿರುತ್ತಾರೆ ಅಥವಾ ಅಧಿಕಾರೇತರರನ್ನು ಆ ಕಮಿಟಿಯಲ್ಲಿ ಇನವಾಲ್ವಮೆಂಟ್ ಮಾಡಿ ಸರಿಯಾಗಿ ಗೈಡನ್ಸ ವ್ಯಾಲ್ಯೂ ಕೊಡುವುದಕ್ಕೆ ಏನಾದರೂ ಸರ್ಕಾರ ಸಮಾಲೋಚನೆ ಮಾಡುತ್ತಿದ್ದೆಯೆ? ಆ ರೀತಿ ಮಾಡಿದರೆ ಅದು ಯೋಗ್ಯವಲ್ಲವೆ? ಅದನ್ನು ಮಂತ್ರಿಗಳು ತಿಳಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ : ನಾವು ಇದರಲ್ಲಿ ಯಾವ ಅಧಿಕಾರೇತರರನ್ನು ಹಾಕಿಲ್ಲ. ಬರೀ ಅಧಿಕಾರಿಗಳನ್ನು ಮಾತ್ರ ಹಾಕಿದ್ದೇವೆ. ಅವರು ಪ್ರತಿಯೊಂದು ಹಳ್ಳಿಗೆ ಹೋಗಿ ಅವರಿವರನ್ನು ಕೇಳಿ ಮಾಡುತ್ತಾರೆ.

(ಗೊಂದಲ)

ಶ್ರೀ ಹೆಚ್. ಶಿವಪ್ಪ : ಅಫಿಷಿಯಲೈಸೇಷನ್ ಆಗುತ್ತದೆ. ಅದು ತಪ್ಪಿಸಬೇಕು.

ಶ್ರೀ ಎಂ. ಶ್ರೀನಿವಾಸ : ತಾವು ಫಿಕ್ಸ್ ಮಾಡಿರತಕ್ಕ ಬೆಲೆ ಬಹಳ ಕಡಿಮೆ ಇದೆ. ಆದುದರಿಂದ ತಾವು ಹತ್ತು ಸಾವಿರ ಇರುವುದನ್ನು 25 ಅಂದರೆ 30 ಸಾವಿರ ಒಂದು ಏಕರೆಗೆ ರಿಜಿಸ್ಟ್ರೇಷನ್ ಫೀ ಮಾಡಿದ್ದೀರಿ. ಮತ್ತೆ ಜಾಸ್ತಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಮತ್ತೆ ಜಾಸ್ತಿ ಮಾಡುತ್ತೀರಾ?

ಶ್ರೀ ಆರ್.ಎಲ್. ಜಾಲಪ್ಪ : ಬೆಂಗಳೂರು ನಗರದಲ್ಲಿ ಸರ್ವೆ ಆಗುತ್ತಿದೆ. ಸೈಂಟಿಫಿಕ್ ಆಗಿ ಸರ್ವೆ ಕಂಪ್ಲೀಟ್ ಆದಮೇಲೆ ಬಹುಶಃ ಒಂದು ತಿಂಗಳೊಳಗೆ ನಮ್ಮ ಕೈಗೆ ಸಿಗಬಹುದೆಂಮ ಕಾಣುತ್ತದೆ. ಅವಶ್ಯಕತೆ ಇದ್ದರೆ ಯೋಚನೆ ಮಾಡುತ್ತೇವೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ : ನನ್ನ ಪ್ರಶ್ನೆ ಇಷ್ಟೇ ಇದೆ. ಭ್ರಷ್ಟಾಚಾರ ಏನು ನಡೆಯುತ್ತಿದೆ ಇದನ್ನು ತಪ್ಪಿಸಲಿಕ್ಕೆ ಸರ್ಕಾರ ಮನಸ್ಸು ಮಾಡಿದರೆ ಸಾಧ್ಯತೆ ಇದೆ. ಕೊಳ್ಳುವವರಿಗೂ ಲಾಭವಾಗಲಿ ಅಥವಾ ಮಾರುವವರಿಗಾದರೂ ಲಾಭವಾಗಲಿ, ಸರ್ಕಾರಕ್ಕಾದರೂ ಲಾಭವಾಗಲಿ. ಮೀಡಿಯೇಟರ್ಸಗೆ ಲಾಭಾವಾಗದಂತೆ ತಪ್ಪಿಸುವುದಕ್ಕೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ? ತಾವು ಮನಸ್ಸು ಮಾಡಿದರೆ ಇದು ಸಾಧ್ಯತೆ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಕಳೆದ 8-9 ತಿಂಗಳುಗಳಿಂದ ನಾವು ಪಡಬಾರದ ಹಿಂಸೆ ಪಟ್ಟು ಯಾವ ರೀತಿ ಇದನ್ನು ಮಾಡಬಹುದೆಂದು ಮಾಡಿದ್ದೇವೆ. ಇದರಿಂದ ನನಗೆ ಶತ್ರುಗಳು ಬಹಳ ಜನ ಜಾಸ್ತಿಯಾಗಿದ್ದಾರೆ. ನಾನು ಏನು ಕಷ್ಟ ಅನುಭವಿಸುತ್ತಿದ್ದೇನೆಂದು ನನಗೆ ಗೊತ್ತಿದೆ. ನಾನು ಜನತೆಗೆ

ಸದನದ ಮೂಲಕ ಪ್ರಾರ್ಥಿಸುತ್ತೇನೆ. ದಯಮಾಡಿ ಸಾಧ್ಯವಾದಷ್ಟು ನಮಗೆ ಏನು ಸಲ್ಲಿಸಬೇಕು ಅದನ್ನು ಕೊಡಿ, ಅಲ್ಲಿ ಲಂಚ ಕೊಡುವುದರ ಬದಲು ಸರ್ಕಾರಕ್ಕೆ ಕೊಡಿ ಎಂದು ನಾನು ಅವರನ್ನು ಪ್ರಾರ್ಥಿಸಿ ಮಾಡಿ ಕೊಳ್ಳುತ್ತೇನೆ. ಕೊಡುವವರು ಇದ್ದರೆ ತೆಗೆದುಕೊಳ್ಳುವವರು ಇರುವುದು. ಕೊಡುವವರು ಇಲ್ಲದೆ ಇದ್ದರೆ ತೆಗೆದುಕೊಳ್ಳುವವರು ಹೇಗೆ ತೆಗೆದುಕೊಳ್ಳುತ್ತಾರೆ? ಈಗ ಏನು ನಾವು ಹೊಸ ಸಿಸ್ಟಂ ತಂದಿದ್ದೇವೆ, ಎಂಡಾರ್ಸಮೆಂಟ್ ಕೊಡುವುದು - ಅಲ್ಲಿ ರಿಜಿಸ್ಟ್ರೇಷನ್ ಡಾಕ್ಯುಮೆಂಟ್ ಪ್ರೊಡ್ಯೂಸ್ ಮಾಡಿದ ತಕ್ಷಣ ಅಲ್ಲಿ ಕೊಡಬೇಕು. ಮೊದಲಿನ ಹಾಗೆ ತೆಗೆದುಕೊಂಡು ಬರಬೇಕಾದುದು ಅನಾವಶ್ಯಕ. ಅಲ್ಲಿ ಹೋಗಿ ಡಾಕ್ಯುಮೆಂಟ್ಸ ರಿಜಿಸ್ಟ್ರೇಷನ್ನಿಗೆ ಕೊಟ್ಟಾಗ ಅವನು ಗೈಡಲೈನ್ಸ ವ್ಯಾಲ್ಯು ತೆಗೆದು ನೋಡಿ ಸ್ಟ್ಯಾಂಪ್ ಡ್ಯೂಟಿ ಇಷ್ಟು, ರಿಜಿಸ್ಟ್ರೇಷನ್ ಫೀ ಇಷ್ಟಾಗುತ್ತದೆಂದು ಬರೆಯಬೇಕು. ಬರೆದ ಮೇಲೆ ಅದನ್ನು ಒಪ್ಪಿಕೊಳ್ಳುತ್ತಾರೆ ಅಥವಾ ಒಪ್ಪಿಕೊಳ್ಳುವುದಿಲ್ಲ. ಅದನ್ನು ಬರೆದು ಪುನಃ ಸಬ್ ರಿಜಿಸ್ಟ್ರಾರಗೆ ಪಾಪಸ್ಸು ಬರಬೇಕು. ರಿಜಿಸ್ಟ್ರೇಷನ್ ಮಾಡುವಾಗ ಆ ಡಾಕ್ಯುಮೆಂಟ್ ಇರಬೇಕೆಂದು ಮಾಡಿದ್ದೇವೆ. ಇದರಿಂದ ಅನಾವಶ್ಯಕವಾಗಿ ಹಣ ಏತಕ್ಕೆ ಕೊಡಬೇಕು? ಮೋಸ ಮಾಡುವುದಕ್ಕೆ ಹಣ ಕೊಟ್ಟರೂ ಕೊಡಬಹುದು. ನಾವು ಇನ್ನೇನು ಮಾಡುವುದಕ್ಕೆ ಸಾಧ್ಯ ಹೇಳಿ?

ಬೀದರ್ ತಾಲ್ಲೂಕಿನ ಗುಲ್ಲರ್ ಹವೇಲಿ ಪ್ರದೇಶದಲ್ಲಿರುವ ಸ.ನಂ. 36, 37, 49 ಮತ್ತು 50ರಲ್ಲಿರುವ ಸರ್ಕಾರಿ ಜಮೀನು ಖಾಸಗಿಯವರಿಂದ ಒತ್ತುವರಿ.

328 - ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ(ಬೀದರ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬೀದರ್ ತಾಲ್ಲೂಕಿನ ಗುಲ್ಲರ್ ಹವೇಲಿ ಪ್ರದೇಶದಲ್ಲಿರುವ ಸ.ನಂ. 36, 37, 49 ಮತ್ತು 50ರಲ್ಲಿರುವ ಜಾಗದ ವಿಸ್ತೀರ್ಣವೆಷ್ಟು;

ಆ) ಇದು ಸರ್ಕಾರಿ ಜಾಗವೇ ಇಲ್ಲದಿದ್ದಲ್ಲಿ ಯಾರ ಹೆಸರಿನಲ್ಲಿ ದಾಖಲೆಗಳು ಇವೆ;

ಇ) ಈ ಜಾಗವನ್ನು ಅನಧಿಕೃತವಾಗಿ ವ್ಯಕ್ತಿಯೊಬ್ಬರು ಒತ್ತುವರಿ ಮಾಡಿಕೊಂಡು ಕಟ್ಟಡವನ್ನು ನಿರ್ಮಿಸುತ್ತಿರುವುದು ನಿಜವಲ್ಲವೆ;

ಈ) ಹಾಗಿದ್ದಲ್ಲಿ, ಈ ಜಾಗವನ್ನು ಸರ್ಕಾರವೇ ವಹಿಸಿಕೊಳ್ಳಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಬೀದರ್ ತಾಲ್ಲೂಕಿನ ಗುಲ್ಲರ್ ಹವೇಲಿ ಪ್ರದೇಶದಲ್ಲಿರುವ ಸ.ನಂ. 36, 37, 49 ಮತ್ತು 50ರಲ್ಲಿರುವ ಜಾಗದ ವಿಸ್ತೀರ್ಣ ಈ ಕೆಳಕಂಡಂತಿದೆ;